**<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು- ಶ್ರೀ ಬಿ.ಎಂ.ಆರ್ ವಕೀಲರಿಂದ 2 ನೇ ಎದುರುದಾರರ ಪರವಾಗಿ.</u>**

ನನ್ನ ವಿದ್ಯಾಭ್ಯಾಸ ದ್ವಿತೀಯ ಪಿ ಯು ಸಿ ಅಪಘಾತದ ದಿನ ನಮ್ಮ ಟಿ ವಿ ಎಸ್ ವಾಹನವನ್ನು ನನ್ನ ತಂದೆ ಚಾಲನೆ ಮಾಡುತ್ತಿದ್ದರು. ಅವರಿಗೆ ಚಾಲನಾ ಪರವಾನಿಗೆ ಇತ್ತು ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ಆರ್ ಟಿ ಓ ಕಚೇರಿ ಚಿತ್ರದುರ್ಗದಿಂದ ಅವರಿಗೆ ಇದ್ದ ಚಾಲನಾ ಪರವಾನಿಗೆ ಬಗ್ಗೆ ದಾಖಲೆ ಪಡೆಯಲು ಪ್ರಯತ್ನ ಮಾಡಿಲ್ಲ. ನಿಪಿ-8 ಎರಡು ಫೋಟೋಗಳಲ್ಲಿ ತೋರಿಸಿರುವ ವಾಹನವು ಅಪಘಾತ ಆದ ನಂತರ ಪಕ್ಕಕ್ಕೆ ಅವುಗಳನ್ನು ಸರಿಸಿದ ನಂತರ ತೆಗೆದಿರುವ ಫೋಟೋಗಳು ಎಂದರೆ ಸರಿ. ಸದರಿ ಫೋಟೋಗಳನ್ನು ನಾವೇ ತೆಗೆದಿರುವುದು. ಸದರಿ ಫೋಟೋಗಳಲ್ಲಿ ಅಪಘಾತ ಸಂಬಂಧ ಲಾರಿಯ ಎಡಭಾಗಕ್ಕೆ ಅಪಘಾತವಾಗಿರುವುದು ತೋರಿಸುತ್ತದೆ ಎಂದರೆ ಸರಿ. ಸದರಿ ಅಪಘಾತದಲ್ಲಿ ನಮ್ಮ ಮೋಟಾರ್ ಸೈಕಲ್ ಸುಟ್ಟು ಹೋಗಿರುವುದನ್ನು ತೋರಿಸಿರುತ್ತಾರೆ ಎಂದರೆ ಸರಿ. ಅಪಘಾತ ಅದ ನಂತರ ಸ್ಥಳಕ್ಕೆ ಹೋಗಿ ವಾಹನಗಳನ್ನು ನೋಡಿರುತ್ತೇನೆ. ಆ ಸಂರ್ಧಬದಲ್ಲಿ ಲಾರಿಯ ಅಡಿಗೆ ಮೋಟಾರ್ ಸೈಕಲ್ ಸಿಕ್ಕು ಹಾಕಿಕೊಂಡು ಸುಟ್ಟು ಹೋಗಿತ್ತು ಎಂದರೆ ಸರಿ. ಆ ಸಂರ್ಧಬದಲ್ಲಿ ಪೋಲಿಸರು ಅಪಘಾತದ ಬಗ್ಗೆ ಫೋಟೋ ತೆಗೆಯುತ್ತಿದ್ದರು ಎಂದರೆ ಸರಿ. ಈಗ ನನಗೆ ತೋರಿಸುತ್ತಿರುವ ದಾಖಲೆಯಲ್ಲಿ ಕಂಡು ಬಂದಿರುವ ಫೋಟೋಗಳಲ್ಲಿ ಅಪಘಾತದ ನಂತರ ತೆಗೆದಿರುವ ಫೋಟೋ ಎಂದರೆ ಸಾಕ್ಷಿಯು ಒಪ್ಪಿಕೊಳ್ಳುತ್ತಾರೆ. ಅದನ್ನು ನಿ.ಆರ್-1 ಎಂದು ಗುರುತಿಸಲಾಯಿತು. ಸದರಿ ಅಪಘಾತದ ಸ್ಥಳದಲ್ಲಿ ಎರಡು ಭಾರಿ ವಾಹನಗಳು ಒಡಾಡಲು ಅವಕಾಶ ಇದೆ ಎಂದರೆ ಸರಿ. ಫೋಟೋದಲ್ಲಿ ಕಂಡು ಬರುವ ವಾಹನವು ಎಡಭಾಗದಲ್ಲಿ ಅದು ಹೋಗಬೇಕಾದ ಜಾಗದಲ್ಲಿ ನಿಂತಿರುವುದು ಎಂದರೆ ಸರಿ. ಅದೇ ರೀತಿ ಮತ್ತೊಂದು ಭಾರಿ ವಾಹನ ಹೋಗಲು ಅವಕಾಶ ಇದೆ ಎಂದರೆ ಸರಿ. ಸದರಿ ಮೋಟಾರ್ ಸೈಕಲ್ 2012 ನೇ ಸಾಲಿನದು ಎಂದರೆ ಸರಿ. ಅಪಘಾತವಾದ ಸಂರ್ದಭದಲ್ಲಿ ಒಂಭತ್ತು ವರ್ಷಗಳ ಹಳೇ ವಾಹನ ಎಂದರೆ ಸರಿ. ಆ ದಿನಾಂಕಕ್ಕೆ ಸದರಿ ವಾಹನದ ಬೆಲೆ ಎಷ್ಟು ಎಂದು ತೋರಿಸಲು ಯವೂದೇ ದಾಖಲೆ ಹಾಜರು ಪಡಿಸಿರುವುದಿಲ್ಲ. ಸದರಿ ವಾಹನವನ್ನು 2012 ರಲ್ಲಿ ಎಷ್ಟು ಹಣಕ್ಕೆ ಪಡೆದಿರುತ್ತೇನೆ ಎಂದು ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಅಪಘಾತದ ನಂತರ ನನ್ನ ತಾಯಿಯ ಹೆಸರಿಗೆ ಮಾಲೀಕತ್ವವನ್ನು ಬದಲಾಯಿಸಿರುವುದು ಎಂದರೆ ಸರಿ. ಇವತ್ತಿನವರೆಗೂ ಸದರಿ ವಾಹನದ ಇಂಜಿನ್ ಮತ್ತು

ಚಾಸಿಯನ್ನು ಉಪಯೋಗಿಸಲು ಬರುವುದಿಲ್ಲ ಎಂದು ಪ್ರಮಾಣ ಪತ್ರ ಪಡೆಯಲು ಅರ್ಜಿಯನ್ನು ಸಲ್ಲಿಸಿಲ್ಲ. ಸದರಿ ವಾಹನವನ್ನು ಪೋಲಿಸರಿಂದ ಪಡೆದು ನಾವು ಉಪಯೋಗಿಸುತ್ತಿಲ್ಲ ಆದ್ದರಿಂದ ಅಂತಹ ಪ್ರಮಾಣ ಪತ್ರವನ್ನು ಪಡೆದಿಲ್ಲ ಎಂದರೆ ಸರಿ. ಸದರಿ ಅಪಘಾತ ನನ್ನ ತಂದೆಯ ತಪ್ಪಿನಿಂದ ಆಗಿದ್ದರೂ ಸಹ ಲಾರಿಯ ಚಾಲಕನ ಯಾವುದೇ ತಪ್ಪು ಇರದೇ ಇದ್ದರೂ ಸುಳ್ಳು ಪರಿಹಾರ ಪಡೆಯಲು ಸುಳ್ಳ ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎ.ಎಂ.ಎ.ಸಿ.ಟಿ, ಚಿತ್ರದುರ್ಗ